**ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ, ಕುಂದಾಪುರ.**

**ಪಿಡಬ್ಲ್ಯೂ:7**

**ಎಸ್.ಸಿ. ಸಂಖ್ಯೆ: 501/23 ಸಿಡಬ್ಲ್ಯೂ:8**

| | | |
|---|---|---|
| **ಸಾಕ್ಷಿದಾರರ ಹೆಸರು** | : | ಉದಯ |
| **ತಂದೆ ಹೆಸರು** | : | ರಾಮ ನಾಯ್ಕ |
| **ವಯಸ್ಸು** | : | 31 |
| **ವೃತ್ತಿ** | : | ಕೂಲಿ ಕೆಲಸ |
| **ವಾಸ** | : | ಹಾಲಾಡಿ ಗ್ರಾಮ, ಕುಂದಾಪುರ ತಾಲೂಕು |

**ದಿನಾಂಕ: 01-07-2025 ಸಾಕ್ಷಿದಾರರನ್ನು ಕರೆಯಿಸಿ ಪ್ರಮಾಣ ವಚನ ಮಾಡಿಸಲಾಯಿತು.**

**ಮುಖ್ಯ ವಿಚಾರಣೆ : ಸರ್ಕಾರಿ ಅಭಿಯೋಜಕರಿಂದ**

ನನಗೆ ಮೃತ ಪಾರ್ವತಿ ಮತ್ತು ಅವರ ಕುಟುಂಬದವರ ಪರಿಚಯ ಇದೆ. ಪಾರ್ವತಿಯವರು ಸುಮಾರು 3 – 4 ವರ್ಷದ ಹಿಂದೆ ಅವರ ಮನೆಯಲ್ಲಿ ಕಡೆಯುವ ಕಲ್ಲಿನ ಮೇಲೆ ಬಿದ್ದು ತಲೆಗೆ ಪೆಟ್ಟಾಗಿ ವೆನ್ ಲಾಕ್ ಆಸ್ಪತ್ರೆಯಲ್ಲಿ ಚಿಕಿತ್ಸೆಗೆ ದಾಖಲಾದ ವಿಷಯ ನನಗೆ ತಿಳಿದಿದೆ. ವೆನ್ ಲಾಕ್ ಆಸ್ಪತ್ರೆಯಲ್ಲಿ ಚಿಕಿತ್ಸೆ ಫಲಕಾರಿಯಾಗದೇ ಅವರು 3 – 4 ದಿನದ ನಂತರ ಆಸ್ಪತ್ರೆಯಲ್ಲಿ ಮರಣ ಹೊಂದಿರುತ್ತಾರೆ. ಆ ಬಗ್ಗೆ ವೆನ್ ಲಾಕ್ ಆಸ್ಪತ್ರೆಯಲ್ಲಿ ಪೋಲೀಸರು ಶವ ಮಹಜರು ನಡೆಸುವ ಸಮಯ ನಾನು ಪಂಚನಾಗಿ ಹಾಜರಿದ್ದೆ ಅಲ್ಲದೇ ಆ ದಿನ ಅಲ್ಲಿ ಗೋಪಾಲ ಮತ್ತು ಹರೀಶ್ ಎನ್ನುವವರು ಕೂಡಾ ಪಂಚರಾಗಿ ಹಾಜರಿದ್ದರು. ಸದ್ರಿ ಪಾರ್ವತಿಯವರು ಅಸ್ವಾಭಾವಿಕ ಮರಣ ಹೊಂದಿರುತ್ತಾರೆ ಅಂತ ನಾವು ಮರಣದ ಬಗ್ಗೆ ನಮ್ಮ ಅಭಿಪ್ರಾಯ ವ್ಯಕ್ತಪಡಿಸಿದ್ದೆವು. ವೆನ್ ಲಾಕ್ ಆಸ್ಪತ್ರೆಯಲ್ಲಿ ತಯಾರಿಸಲಾದ ಶವ ಪಂಚನಾಮೆಯಲ್ಲಿರುವ ತನ್ನ ಸಹಿಯನ್ನು ನೋಡಿ ಸಾಕ್ಷಿ ಗುರುತಿಸಿದ್ದು, ಶವ ಪಂಚನಾಮೆಯನ್ನು ನಿಪಿ-11 ಎಂದೂ ಅದರಲ್ಲಿರುವ ಸಾಕ್ಷಿ ಸಹಿಯನ್ನು ನಿಪಿ-11 ಎ ಎಂದು ಗುರುತಿಸಲಾಯಿತು. ನಂತರ ನಾನು ಪೋಲೀಸರಿಗೆ ಪಾರ್ವತಿ ಸಾವಿನ ಕುರಿತು ಯಾವುದೇ ಹೇಳಿಕೆ ನೀಡಿರುವುದಿಲ್ಲ. ಪಾರ್ವತಿ ಮಗ ಕೃಷ್ಣನ ವಿರುದ್ಧ ದೂರು ದಾಖಲಾದ ವಿಷಯ ನನಗೆ ತಿಳಿದಿಲ್ಲ.

**(ಸಾಕ್ಷಿಯು** ಭಾಗಶಃ **ಪ್ರತಿಕೂಲ ಸಾಕ್ಷಿಯಾದ ಕಾರಣ ಆತನನ್ನು ಪಾಟೀ ಸವಾಲು ಮಾಡಲು ಅಭಿಯೋಜಕರು ಅನುಮತಿಯನ್ನು ಕೋರಿರುತ್ತಾರೆ. ಆ ಬಗ್ಗೆ ಅನುಮತಿ ನೀಡಲಾಯಿತು)**

**ಪಾಟೀ ಸವಾಲುಃ ಸರ್ಕಾರಿ ಅಭಿಯೋಜಕರಿಂದ**

ದಿಃ**22-09-2022** ರಂದು ರಾತ್ರಿ ವೆನ್ ಲಾಕ್ ಆಸ್ಪತ್ರೆಯಲ್ಲಿ ಪಾರ್ವತಿಯವರು ಮೃತಪಟ್ಟಿದು, ದಿಃ**23-09-2022** ರಂದು ವೆನ್ ಲಾಕ್ ಆಸ್ಪತ್ರೆಯಲ್ಲಿ ಪೋಲೀಸರು ಶವ ಮಹಜರು ನಡೆಸಿರುತ್ತಾರೆ ಎಂದರೆ ಸರಿ.

ದಿಃ**18-09-2022** ರಂದು ರಾತ್ರಿ ಆರೋಪಿ ಕೃಷ್ಣ ಮನೆಯಲ್ಲಿ ತಾಯಿ ಪಾರ್ವತಿ ಜೊತೆ ಗಲಾಟೆ ಮಾಡಿ ಅಡುಗೆ ಮನೆಯಲ್ಲಿದ್ದ ಮರದ ಕೊರಡಿನಿಂದ ತಲೆಗೆ ಹೊಡೆದು ಗಾಯಗೊಳಿಸಿದ್ದು, ತಲೆಗೆ ಆಗಿರುವ ಗಂಭೀರ ಒಳ ಜಖಂನಿಂದ ಪಾರ್ವತಿ ಚಿಕಿತ್ಸೆಗೆ ಸ್ಪಂದಿಸದೇ ಮೃತಪಟ್ಟ ವಿಚಾರ ಹಾಗೂ ಕೃಷ್ಣ ನಾಯ್ಕನ ವಿರುದ್ಧ ಪೋಲೀಸು ಠಾಣೆಯಲ್ಲಿ ಕೊಲೆ ಪ್ರಕರಣ ದಾಖಲಾದ ವಿಷಯ ನನಗೆ ತಿಳಿದಿರುತ್ತದೆ ಎಂದರೆ ಸರಿ ಅಲ್ಲಾ. ಆ ಬಗ್ಗೆ ನಾನು ದಿಃ**09-10-2022** ರಂದು ಪೋಲೀಸರಿಗೆ ನನಗೆ ಈಗ ಓದಿ ಹೇಳಿದತೆ ಹೇಳಿಕೆ ನೀಡಿರುತ್ತೇನೆ ಎಂದರೆ ಸರಿ ಅಲ್ಲಾ. ಸದ್ರಿ ಹೇಳಿಕೆಯನ್ನು ನಿಪಿ-**12** ಎಂದು ಗುರುತಿಸಲಾಯಿತು.

ಆರೋಪಿ ನಮ್ಮ ಊರಿನವರಾಗಿರುವುದರಿಂದ ಆತನಿಗೆ ಸಹಾಯ ಮಾಡುವ ಉದ್ದೇಶದಿಂದ ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿ ಅಲ್ಲಾ.

**ಪಾಟೀ ಸವಾಲುಃ ಆರೋಪಿ ಪರ ಶ್ರೀ ಎಂ ಆರ್ ಕೆ ಟಿ ವಕೀಲರಿಂದ ಹಾಜರಿದ್ದು, ಪಾಟೀ ಸವಾಲು ಇಲ್ಲಾ ಎಂದು ಹೇಳಿರುತ್ತಾರೆ.**

**ಮರು ವಿಚಾರಣೆಃ** ಇಲ್ಲ.

**(ನನ್ನ ಉಕ್ತಲೇಖನದಂತೆ ತೆರದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)**

**ಓ ಹೇ ಕೆ ಸರಿ ಇದೆ.**

ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
**ಕುಂದಾಪುರ**